# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ದಕ್ಷಿಣ ಕನ್ನಡದ ಬಿಜೆಪಿಯ ಹಿಂದೂ ಯುವ ಕಾರ್ಯಕರ್ತ ಬೆಳ್ಳಾರೆಯ ಶ್ರೀ ಪ್ರವೀಣ್ ಅವರ ಹತ್ಯೆಯನ್ನು ಖಂಡಿಸಿ ಹಿಂದು ಹಿತರಕ್ಷಣಾ ಸಮಿತಿ, ಕರ್ನಾಟಕದ ವತಿಯಿಂದ ಬೆಂಗಳೂರಿನ ಟೌನ್ ಹಾಲ್‌ನಲ್ಲಿ ನಡೆದ ಪ್ರತಿಭಟನೆ.


ಸಂಪುಟ : 44 | ಸಂಚಿಕೆ : 9 | ಶುಭಕೃತ್ – ಶ್ರಾವಣ/ಭಾದ್ರಪದ | ಕಲಿಯುಗಾಬ್ದ 5124 | 15–08–2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಸಂಘದಲ್ಲಿ ಯಾವ ಸ್ವಯಂಸೇವಕರಿಗೂ ನೀನು ಯಾವ ಜಾತಿ ಎಂದು ಕೇಳುವುದಿಲ್ಲ!!

ರಾಷ್ಟ್ರೀಯ ಸ್ವಯಂಸೇವಕ ಸಂಘ ಜನಸಂಖ್ಯೆಯ ಕಾನೂನಿನ ಬಗೆಗೆ ಏನು ಯೋಚಿಸುತ್ತದೆ? ಸಾಮಾಜಿಕ ಸಮರಸತೆಯ ಕುರಿತಾಗಿ ಸಂಘದ ಕಾರ್ಯ ಎಲ್ಲಿಯವರೆಗೆ ನಡೆದಿದೆ? ದೇಶದಲ್ಲಿ ಮುಸಲ್ಮಾನ ಸಮುದಾಯ ತೊಂದರೆಯಲ್ಲಿದೆಯೇ? ಹೀಗೆ ಅನೇಕ ವಿಚಾರಗಳ ಕುರಿತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ಪ್ರಚಾರ ಪ್ರಮುಖರಾದ ಸುನೀಲ್ ಅಂಬೇಕರ್ ಅವರು ನವಭಾರತ ಟೈಮ್ಸ್‌ಗಾಗಿ ವಿಶೇಷವಾಗಿ ನೀಡಿದ ಸಂದರ್ಶನದ ಕೆಲವು ಅಂಶಗಳು –

**ರಾಷ್ಟ್ರೀಯ ಸ್ವಯಂಸೇವಕ ಸಂಘವು ಸಾಮಾಜಿಕ ಸಮರಸತೆಯ ಕುರಿತಾಗಿ ಕೆಲಸ ಮಾಡುತ್ತಿದೆ ಈ ನಿಟ್ಟಿನಲ್ಲಿ ಸಂಘವು ಎಲ್ಲಿಯವರೆಗೂ ಮುಂದುವರೆದಿದೆ? ಸಂಘದ ಕೆಲಸ ಎಷ್ಟು ಪರಿಣಾಮಕಾರಿಯಾಗಿದೆ?**

ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಸ್ಥಾಪನೆಯಾದಾಗಿನಿಂದಲೂ ಕೂಡ ಈ ದಿಶೆಯಲ್ಲಿ ಕೆಲಸವನ್ನು ನಡೆಸುತ್ತಲೇ ಸಾಗುತ್ತಾ ಬಂದಿದೆ. ಸಂಘವು ಸ್ಥಾಪನೆಯಾದ ಮೊದಲ ದಿನದಿಂದಲೇ 'ಹಿಂದೂಗಳೆಲ್ಲರೂ ಒಂದೇ' ಎಂದು ಸಾರುತ್ತಾ ಬಂದಿದೆ. ಮೊತ್ತ ಮೊದಲ ದಿನಗಳಿಂದ ಹಿಡಿದು ಈಗಿನ ಶಾಖೆಯನ್ನೋ ಅಥವಾ ಶಿಬಿರವನ್ನೋ ತೆಗೆದುಕೊಂಡರೂ ಅಲ್ಲಿ ಜಾತಿಯ ಅನುಸಾರವಾಗಿ ಯಾವುದೇ ಭೇದಭಾವವನ್ನು ಕಾಣಲು ಸಾಧ್ಯವಿಲ್ಲ ಅಷ್ಟೇ ಅಲ್ಲ, ಅಲ್ಲಿ ಯಾವ ಸ್ವಯಂಸೇವಕರಿಗೂ ನೀನು ಯಾವ ಜಾತಿ ಎಂದು ಕೇಳುವುದಿಲ್ಲ. ಇದು ಸಂಘದ ಆಂತರಿಕ ವ್ಯವಸ್ಥೆಯಲ್ಲಿ ಹೀಗೆಯೇ ನಡೆದುಕೊಂಡು ಬಂದಿದೆ. ಸಂಘದ ಈ ವ್ಯವಸ್ಥೆಯಲ್ಲಿ ಸಂಪರ್ಕ ನಡೆಯುತ್ತಾ ಬಂದಿದೆ. ಅದು ಈ ಎಲ್ಲಾ ಭೇದಭಾವಗಳಿಂದ ಆಚೆಗೆ ಬೆಳೆದು ಬಂದಿದೆ, ಇಲ್ಲಿ ಜಾತಿಗೆ ಯಾವುದೇ ಜಾಗವಿಲ್ಲ. ಇದೆಲ್ಲ ಸಂಘವು ಆರಂಭದಿಂದಲೂ ಸಾಮಾಜಿಕ ಸಮರಸತೆಗಾಗಿ ನಡೆಸಿಕೊಂಡು ಬಂದಿರುವ ಪ್ರಯತ್ನಗಳು, ಈಗ ಅದು ಸಮಾಜದ ಎಲ್ಲ ವರ್ಗಕ್ಕೂ ವ್ಯಾಪಕವಾಗಿ ಹರಡುತ್ತಿದೆ. ಈ ರೀತಿಯ ಭೇದಭಾವವನ್ನು ಕೊನೆಗೊಳಿಸಲು ಸ್ವಯಂಸೇವಕರು ಪ್ರಯತ್ನ ನಡೆಸುತ್ತಿದ್ದಾರೆ. ಎಲ್ಲ ಜಾತಿ ಸಮುದಾಯಗಳಿಂದಲೂ ಈ ರೀತಿಯ ಜನರು ತಮ್ಮ ಪ್ರಯತ್ನವನ್ನು ಮುಂದುವರೆಸುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ಸಮಾಜದ ಎಲ್ಲ ಪ್ರಶ್ನೆಗಳಿಗೆ ಉತ್ತರ ದೊರಕಿದೆ ಎಂದೇನೂ ಇಲ್ಲ, ಆದರೆ ಒಂದಂತೂ ಬಹಳ ಸ್ಪಷ್ಟವಾಗಿದೆ, ಅದೇನೆಂದರೆ ಎಲ್ಲ ಜಾತಿ ಸಮುದಾಯದವರೂ ಒಂದೆಡೆ ಕುಳಿತು ಪರಿಹಾರವನ್ನೂ, ಸಮಾಧಾನವನ್ನೂ, ಹುಡುಕುವ ಪ್ರಯತ್ನ ಮಾಡುವ ಸ್ಥಿತಿಯವರೆಗೂ ತಲುಪಲು ನಮಗೆ ಸಾಧ್ಯವಾಗಿದೆ. ಇದೆಲ್ಲವೂ ಸಮಾಜದ ಸಹಯೋಗದಲ್ಲಿ ಸಹಕಾರದಲ್ಲಿ ಸಮಾಜದೊಟ್ಟಿಗೆಯೇ ನಡೆದಿದೆ ಮತ್ತು ಈ ಕಾರ್ಯಗಳು ಇಲ್ಲಿಗೇ ನಿಲ್ಲದೆ ಮುಂದೆಯೂ ಅತ್ಯಂತ ಸಮರ್ಥವಾಗಿ ನಡೆಯಲಿದೆ.

**ದೇಶದಲ್ಲಿ ಅಮರಾವತಿ ಮತ್ತು ಉದಯಪುರದಂತಹ ಘಟನೆಗಳನ್ನು ನೋಡಿ ನಿಮಗೆ ಏನೆನ್ನಿಸುತ್ತದೆ? ಸಾಮಾಜಿಕ ಮತ್ತು ಸಾಂಪ್ರದಾಯಿಕ ಸದ್ಭಾವನೆಯನ್ನು ಸಮಾಜದೊಳಗೆ ಮತ್ತೆ ಪಸರಿಸುವ ಮಹತ್ಕಾರ್ಯವನ್ನು ಅತ್ಯಂತ ದೊಡ್ಡ ಮಟ್ಟದಲ್ಲಿ ಮಾಡುವ ಅವಶ್ಯಕತೆ ಇದೆಯೇ?**

ನಾವೆಲ್ಲ ಒಂದೇ ದೇಶದ ಜನರು. ಹಿಂದೂಗಳೋ, ಮುಸಲ್ಮಾನರೋ, ಕ್ರಿಶ್ಚಿಯನ್ನರೋ ಆದರೆ ನಾವೆಲ್ಲ ಭಾರತೀಯರು. ಸರಸಂಘಚಾಲಕರು ಯಾವಾಗಲೂ ಒಂದು ಮಾತನ್ನು ಹೇಳುತ್ತಿರುತ್ತಾರೆ, ನಮ್ಮ ಪೂರ್ವಜರೆಲ್ಲ ಒಬ್ಬರೇ, ನಮ್ಮ ಎಲ್ಲರ ಡಿಎ ಕೂಡ ಒಂದೇ ಆಗಿದೆ ಎನ್ನುತ್ತಾರೆ. ಪೂಜೆ ಮಾಡುವ ಪದ್ಧತಿ, ವಿಧಾನ ಬದಲಾದ ಕೂಡಲೇ ಯಾರದ್ದಾದರೂ ರಾಷ್ಟ್ರ ಬದಲಾಗಲು ಸಾಧ್ಯವೇ? ಸಕಾರಾತ್ಮಕ ವಿಚಾರಗಳ ಕುರಿತು ಮಾತ್ರವೇ ರಾಷ್ಟ್ರೀಯ ಸ್ವಯಂಸೇವಕ ಸಂಘ ಜಾಗೃತಿ ಮಾಡುತ್ತದೆ. ಯಾವಾಗ ಈ ರೀತಿಯ ವಿಘಟನಕಾರಿ ವಿದ್ರೋಹದ ಘಟನೆಗಳು ನಡೆಯುತ್ತವೋ ಆ ಎಲ್ಲ ಪ್ರಕರಣಗಳನ್ನು ಸಾಂವಿಧಾನಿಕ ಪ್ರಕ್ರಿಯೆಗಳ ಮೂಲಕವೇ ಸರಿಯಾದ ಪ್ರತ್ಯುತ್ತರ ನೀಡುವ ಮತ್ತು ಅದನ್ನು ನಿಷೇಧ ಮಾಡುವ ಕೆಲಸ ನಡೆಯಬೇಕು. ಈ ಕೆಲಸವನ್ನು ಕೇವಲ ಹಿಂದೂಗಳಷ್ಟೇ ಅಲ್ಲ, ಮುಸಲ್ಮಾನರೂ ಕೂಡ ಅತ್ಯಂತ ಕಟುವಾಗಿ ನಿಷೇಧ ಮಾಡುವ ಕೆಲಸದಲ್ಲಿ ಕೈ ಜೋಡಿಸಬೇಕು. ಏಕೆಂದರೆ ಈ ರೀತಿಯ ಪ್ರತ್ಯೇಕತಾವಾದಿ ಮನಸ್ಥಿತಿಯಿಂದ ಯಾವ ಸಮಾಜ, ಸಮುದಾಯದ ಹಿತವೂ ಸಾಧ್ಯವಾಗುವುದಿಲ್ಲ. ಹಾಗಾಗಿ ದೇಶದ ಹಿತವೂ ಸಾಧ್ಯವಾಗುವುದಿಲ್ಲ.

**ಅನೇಕ ಬಾರಿ ಈ ರೀತಿಯ ವಾತಾವರಣವನ್ನು ನಿರ್ಮಾಣ ಮಾಡುತ್ತಾ ಅಥವಾ ಮಾಡುವ ರೀತಿಯಲ್ಲಿ ತೋರಿಸುತ್ತಾ ಭಾರತದಲ್ಲಿ ಮುಸಲ್ಮಾನರು ಆತಂಕದಲ್ಲಿದ್ದಾರೆ, ಭಯ ಹುಟ್ಟಿಸುವ ವಾತಾವರಣವನ್ನು ನಿರ್ಮಾಣ ಮಾಡಲಾಗುತ್ತಿದೆ ಎನ್ನಲಾಗುತ್ತಿದೆ. ನೀವು ಇದನ್ನು ಹೇಗೆ ನೋಡುತ್ತೀರಿ?**

ಭಾರತದ ಪರಂಪರೆಯಲ್ಲಿಯೇ ಕೆಲವು ವಿಚಾರಗಳು ರಕ್ತಗತವಾಗಿ ಬಂದಿವೆ, ಅಂಥರೆ ಇಲ್ಲಿ ಎಲ್ಲ ಪೂಜಾಪದ್ಧತಿಗಳಿಗೂ ಮಾನ್ಯತೆಯಿದೆ, ಮತ್ತು ಜಗತ್ತಿನ ಎಲ್ಲ ಪೂಜಾ ಪದ್ಧತಿಗಳಿಗೂ ಭಾರತ ಸುರಕ್ಷಿತವಾದ ತಾಣ ಎಂಬುದು ಸತ್ಯ, ಇದು ಭಾರತದಲ್ಲಿರುವ ಹಿಂದೂಗಳು ತಲೆತಲಾಂತರದಿಂದ ಆಚರಿಸಿಕೊಂಡು ಬಂದಿರುವ ಪರಂಪರೆ.ಇದನ್ನು ಭಾರತದ ಹೆಚ್ಚು ಜನ ಪಾಲನೆಯನ್ನೂ ಮಾಡುತ್ತಾರೆ. ಇದೇ ಕಾರಣಕ್ಕಾಗಿ ಭಾರತವು ಅತ್ಯಂತ ಸಮರ್ಥವಾಗಿ ಮುಂದುವರೆಯುತ್ತಿದೆ. ಈ ವಿಚಾರ ಉಳಿಯುವುದರಿಂದಾಗಿಯೇ ಮುಂದೆ ಹೋಗಲು ಸಾಧ್ಯ.

**ಜನಸಂಖ್ಯಾ ನಿಯಂತ್ರಣ ಕಾನೂನಿನ ಬಗೆಗೆ ಬೇಡಿಕೆ ಹೆಚ್ಚುತ್ತಿದೆ.ಕೆಲವು ಸಂಸದರೂ ಇದಕ್ಕೆ ದನಿಗೂಡಿಸುತ್ತಿದ್ದಾರೆ. ಇದರ ಕುರಿತಾಗಿ ಸಂಘದ ಅಭಿಪ್ರಾಯವೇನು?**

ಇಡೀ ಜಗತ್ತಿನಲ್ಲಿ ಮತ್ತು ನಮ್ಮ ದೇಶದಲ್ಲಿಯೂ ಕೂಡ ಸೃಷ್ಟಿಯಲ್ಲಿ ಉಪಲಬ್ಧವಿರುವ ಸಂಸಾಧನ ಇದೆಯೋ ಅದರಂತೆಯೇ ಜನಸಂಖ್ಯೆ ಇರಬೇಕು, ಆಗ ಮಾತ್ರವೇ ಎಲ್ಲರೂ ಸುಖವಾಗಿರುಲು ಸಾಧ್ಯ ಎಂಬ ವಿಚಾರದ ಕುರಿತು ಸಹಮತವಿದೆ. ಜನಸಂಖ್ಯೆಯ ಪ್ರಬಂಧನವನ್ನು ಕುರಿತು ಈ ವಿಚಾರದ ಬಗೆಗೆ ಭಾರತೀಯರಲ್ಲಿಯೂ ಇದೇ ವಿಚಾರಕ್ಕೆ ಮಾನ್ಯತೆಯಿದೆ. ಇದು ಪರಿಸರದ ದೃಷ್ಟಿಯಿಂದಲೂ ಒಳ್ಳೆಯದು ಮತ್ತು ಇದು ಸರ್ವಸಮ್ಮತಿಯ ವಿಚಾರವೂ ಹೌದು. ಅದನ್ನು ಈಗ ಹೇಗೆ ಕಾರ್ಯಗತಗೊಳಿಸುವುದು ಅದನ್ನು ಕಾನೂನಾಗಿ ಪರಿವರ್ತನೆಗೊಳಿಸುವುದೋ? ಅಥವಾ ಜನರನ್ನು ಜಾಗೃತಗೊಳಿಸಿ ಈ ಕಾರ್ಯ ಸಫಲಗೊಳಿಸುವುದೋ, ಇದು ಸರಕಾರಕ್ಕೆ ಬಿಟ್ಟ ವಿಷಯ. ಆದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರಕೃತಿಯ ಸಂತುಲವನ್ನು ಗಮನದಲ್ಲಿಟ್ಟುಕೊಂಡು ಜನಸಂಖ್ಯೆಯ ಕುರಿತಾಗಿ ಜನಜಾಗೃತಿಯ ಕೆಲಸವನ್ನಂತೂ ಮಾಡುತ್ತಿದೆ.

**ಸಂಘ ಸ್ಥಾಪನೆಯಾಗಿ 100 ವರ್ಷಗಳು ಸಂಪನ್ನಗೊಳ್ಳುತ್ತಿದೆ. ಯಾವುದಾದರೂ ದೊಡ್ಡ ಮಟ್ಟದ ಕಾರ್ಯಕ್ರಮಗಳ ಆಯೋಜನೆಯಾಗುತ್ತಿದೆಯೇ?**

2025ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ 100 ವರ್ಷ ಸಂಪನ್ನವಾಗುತ್ತಿದೆ. ಕಾರ್ಯಕ್ರಮಗಳ ಕುರಿತು ಅನೇಕ ಯೋಜನೆಗಳಂತೂ ನಡೆಯುತ್ತಿದೆ. ಈಗ ಸಂಘದ ಶಾಖೆಗಳು ದೇಶದ ತುಂಬೆಲ್ಲ ಹರಡಿದ್ದು 55 ಸಾವಿರ ಶಾಖೆಗಳು ನಡೆಯುತ್ತಿದೆ. ಆದರೆ ಈ ಶತಾಬ್ಧಿ ವರ್ಷಗಳದಲ್ಲಿ ನಮ್ಮ ಲಕ್ಷ್ಯವು ಲಕ್ಷ ಶಾಖೆಗಳನ್ನು ದಾಟುವ ದಾರಿಯಲ್ಲಿದೆ. ಪ್ರತಿ ಶಾಖೆಯೂ ಕೂಡ ತನ್ನ ಸುತ್ತಮುತ್ತಲಿನ ಜಾಗಗಳಲ್ಲಿ ವಿಸ್ತಾರವಾಗುವ ರೀತಿಯಲ್ಲಿ ಚಿಂತನೆಯನ್ನು ನಡೆಸಲಿದೆ. ಅಲ್ಲದೆ ಎಲ್ಲಿ ಇಲ್ಲಿಯವರೆಗೂ ಶಾಖೆಗಳು



ನಡೆದಿಲ್ಲವೋ ಅಲ್ಲಿಯೂ ಸಹ ಶಾಖೆಗಳನ್ನು ಹೊಸದಾಗಿ ಪ್ರಾರಂಭ ಮಾಡುವ ಪ್ರಕ್ರಿಯೆಗಳು ಆರಂಭವಾಗುತ್ತಿದೆ. ಜನರ ಅವಶ್ಯಕತೆಗಳಿಗೆ ಅನುಗುಣವಾಗಿ ವಾರದ ಸಾಂಘಿಕ್‌ಗಳನ್ನು ಹೆಚ್ಚು ಮಾಡುವ ಆಲೋಚನೆಯೂ ಇದೆ. ಮುಖ್ಯರಸ್ತೆ, ಹಳ್ಳಿರಸ್ತೆಗಳ ಅಕ್ಕಪಕ್ಕವೂ ಶಾಖೆಗಳನ್ನು ಹೆಚ್ಚು ಮಾಡುವ ಕಾರ್ಯ ನಡೆಯುತ್ತಿದೆ.

**ಸಂಘದ ಪ್ರಚಾರಕರು ಬಿಜೆಪಿಯ ಮೂಲಕ ರಾಜನೀತಿಯ ಭೂಮಿಕೆಯನ್ನು ನಿಭಾಯಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ, ಆದರೆ ಸೇವಿಕಾ ಸಮಿತಿಯ ಪ್ರಚಾರಿಕೆಯರು ರಾಜನೀತಿಯಲ್ಲಿ ಕಾರ್ಯಪ್ರವೃತ್ತರಾಗಿರುವುದನ್ನು ನಾವು ಕಂಡಿಲ್ಲ, ಯಾಕೆ ಹೀಗೆ? ಹಾಗಾದರೆ ಮಹಿಳಾ ಪ್ರಚಾರಿಕೆಯರು ಬಿಜೆಪಿಯ ಸಂಘಟನಾ ಮಂತ್ರಿಯಾಗಲು ಸಾಧ್ಯವಿಲ್ಲವೆ?**

ಒಬ್ಬ ಮಹಿಳೆ ರಾಷ್ಟ್ರಪತಿಯಾಗಲು ಸಾಧ್ಯವಿದೆ ಎಂದಾದರೆ, ಮುಖ್ಯಮಂತ್ರಿಯಾಗಲು ಸಾಧ್ಯವಿದೆ ಎಂದಾದರೆ ಇಲ್ಲಿ ಸಂಘಟನಾ ಕಾರ್ಯದರ್ಶಿಯಾಗುವುದು ದೊಡ್ಡ ಮಾತೇನಲ್ಲ. ಸಂಘಟನೆಗಳೂ ತಮ್ಮದೇ ರೀತಿಯಲ್ಲಿ ಸ್ವಾಯತ್ತವಾದ ನಿರ್ಧಾರ ತೆಗೆದುಕೊಳ್ಳುವ ಸಲುವಾಗಿ ಶಕ್ತರಿದ್ದಾರೆ. ಎಲ್ಲ ಸಂಘಟನೆಗಳು ತಮ್ಮ ಅವಶ್ಯಕತೆ, ಅನಿವಾರ್ಯತೆ ಮತ್ತು ಸ್ಥಿತಿಯ ಆಧಾರದ ಮೇಲೆ ಕೆಲಸ ನಿರ್ವಹಣೆ ಮಾಡುತ್ತದೆ.

**ಘರ್–ಘರ್ ತಿರಂಗಾ ಅಭಿಯಾನದಲ್ಲಿ ಸಂಘ ಯಾವ ಪಾತ್ರವನ್ನು ವಹಿಸುತ್ತಿದೆ? ಯಾವ ಭೂಮಿಕೆಯನ್ನು ನಿರ್ವಹಣೆ ಮಾಡುತ್ತಿದೆ?**

ಇದು ಇಡೀ ದೇಶದ ಅಭಿಯಾನವಾಗಿದೆ. ಇದು ದೇಶವ್ಯಾಪಿಯಾದ ಆಂದೋಲನವೂ ಹೌದು, ಇದರಲ್ಲಿ ಸಂಘದ ಸ್ವಯಂಸೇವಕರೂ ಕೂಡ ಸಹಭಾಗಿಗಳಾಗಲಿದ್ದಾರೆ. ಸರಕಾರಿ ಕಾರ್ಯಕ್ರಮದಲ್ಲೂ ಸಂಘದ ಸ್ವಯಂಸೇವಕರು ಸಹಭಾಗಿಗಳಾಗಲಿದ್ದಾರೆ. ಯಾವ ಕಾರ್ಯಕ್ರಮಗಳು ಸಮಾಜದ ವಿವಿಧ ಸಂಸ್ಥೆಗಳ ಮೂಲಕ ನಡೆಸಲಾಗುತ್ತದೋ ಇದರಲ್ಲೂ ಸ್ವಯಂಸೇವಕರು ಶಾಮೀಲಾಗಲಿದ್ದಾರೆ. ಸಂಘದ ಸ್ವಯಂಸೇವಕರನೇಕರೂ ಸಹ ಅನೇಕ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ, ಅವರೂ ಸಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿದ್ದಾರೆ.

## ಸಂಸ್ಮರಣೆ

# ದತ್ತೋಪಂತ ಬಾಪುರಾವ್ ಠೇಂಗಡಿ (10ನೇ ನವೆಂಬರ್, 1920–14ನೇ ಅಕ್ಟೋಬರ್ 2004)


ಸಾಮ್ರಾಜ್ಯವಾದಿ ದೇಶ ಬ್ರಿಟನ್ನಿನ ವಿರುದ್ಧದ ಭಾರತದ ಸ್ವಾತಂತ್ರ ಸಂಗ್ರಾಮವನ್ನು ಪ್ರತಿಯೊಬ್ಬ ಭಾರತೀಯನ ಮನೆಬಾಗಿಲಿಗೆ ತಲುಪಿಸುವ ಉದ್ದೇಶ್ಯದಿಂದ ಪರಿಶೋಧಿಸಿದ ಉಪಕ್ರಮಗಳಲ್ಲಿ ಸ್ವದೇಶೀ ಆಂದೋಲನ ಅತ್ಯಂತ ಪ್ರಭಾವಿಯಾಗಿತ್ತು. ಸ್ವಾತಂತ್ರ ಚಳವಳಿಯ ಕಾಲದಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕ್, ಸ್ವಾತಂತ್ರವೀರ ಸಾವರ್ಕರ್, ಮಹರ್ಷಿ ಅರವಿಂದ ಮತ್ತು ಮಹಾತ್ಮಾಗಾಂಧಿಯವರಿಂದ ದೊರೆತ ನೇತೃತ್ವಗಳಿಂದಾಗಿ ಸ್ವದೇಶೀ ಆಂದೋಲನಕ್ಕೆ ಪ್ರಾಂತ್ಯ– ಭಾಷೆ, ಬಡವ–ಬಲ್ಲಿದ, ಅಕ್ಷರಸ್ಥ–ಅನಕ್ಷರಸ್ಥರೆಂಬ ಭೇದಗಳನ್ನು ಮೀರಿ ಸ್ವಾಭಿಮಾನಿ, ಸ್ವಾವಲಂಬಿ 'ಭಾರತೀಯ ಭಾವ'ವನ್ನು ಜಾಗ್ರತಗೊಳಿಸಲು ಸಹಾಯವಾಯಿತು.

ಸ್ವಾತಂತ್ರದ ನಂತರದ ದಿನಗಳಲ್ಲಿ ಸ್ವದೇಶಿಯ ಚಿಂತನೆಯ ಪರಿಕಲ್ಪನೆ ವಿದೇಶಿ ವಸ್ತುಗಳ ಬಹಿಷ್ಕಾರ ಎಂಬ ಸಂಕುಚಿತ ಅರ್ಥದ ಹಣೆಪಟ್ಟಿಯನ್ನು ಅಂಟಿಸಿಕೊಂಡಿತು. ಕೆಲವೊಮ್ಮೆ ಆಧುನಿಕತೆಯ ವಿರೋಧಿ, ಪ್ರಗತಿ ವಿರೋಧಿಗಳೆಂಬ ಮೂದಲಿಕೆಯನ್ನೂ ಅದು ಎದುರಿಸಬೇಕಾಯ್ತು.

"ಸ್ವದೇಶಿಯನ್ನು ಕೇವಲ ಕೆಲವೊಂದಿಷ್ಟು ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದ್ದು ಎಂದು ತಿಳಿಯುವುದು ತಪ್ಪು. ಅದೊಂದು ಪ್ರಾಸಂಗಿಕ ಅಂಶ ಮಾತ್ರ. ಮೂಲಭೂತವಾಗಿ ಇದು ರಾಷ್ಟ್ರೀಯ ಸ್ವಾವಲಂಬನೆ, ರಾಷ್ಟ್ರೀಯ ಸ್ವಾಯತ್ತತೆ ಮತ್ತು ಸ್ವಾತಂತ್ರದ ಜೋಪಾಸನೆಗಾಗಿ ತಳೆದ ದೃಢಸಂಕಲ್ಪಕ್ಕೆ ಸಂಬಂಧಿಸಿದ್ದು" – ಎಂದು ತಿಳಿಹೇಳಿ ಸ್ವಾತಂತ್ರ್ಯೋತ್ತರದ ಹೊಸ ಪೀಳಿಗೆಗೆ ಸ್ವದೇಶಿಯ ಸ್ವಭಾವವನ್ನು ಮರುಪರಿಚಯಿಸಿದವರು ದತ್ತೋಪಂತ ಬಾಪುರಾವ್ ಠೇಂಗಡಿಯವರು.

ದತ್ತೋಪಂತರು ಎಂ.ಎ., ಎಲ್.ಎಲ್.ಬಿ ಮುಗಿಸಿ ಕಾಲೇಜಿನಿಂದ ಹೊರಬಂದವರು ಆಗಲೇ ಪರಿಚಯವಾಗಿದ್ದ ಸಂಘಕ್ಕೆ ಸೇರಿಕೊಂಡರು. 1942ರಲ್ಲಿ ಅವರನ್ನು ಪ್ರಚಾರಕ್ ಆಗಿ ಕೇರಳಕ್ಕೆ ಕಳುಹಿಸಿಕೊಡಲಾಯಿತು. ಆಗ ಅವರಿಗೆ 21–22 ವರ್ಷ. ಮಲೆಯಾಳಿ ಭಾಷೆ ಗೊತ್ತಿಲ್ಲ. ಕಲ್ಲಿಕೋಟೆಗೆ ಹೋದಾಗ ಒಬ್ಬ ವಕೀಲರು ಇವರಲ್ಲಿ "ಕೇರಳದಲ್ಲಿ ಸಂಘದ ಕೆಲಸ ಅಸಾಧ್ಯ; ಸಮಯ ವ್ಯರ್ಥ"ಎಂದು ಹೇಳಿದರಂತೆ. ಆದರೆ ಠೇಂಗಡಿಜೀ ಅಲ್ಲಿ ಸಂಘದ ಕೆಲಸವನ್ನು ಆರಂಭಿಸಿದ್ದಷ್ಟೇ ಅಲ್ಲ; ಅದಕ್ಕೆ ಗಟ್ಟಿ ತಳಪಾಯವನ್ನೇ ಹಾಕಿದರು. ಅನಂತರ ಅವರನ್ನು ಪ್ರಚಾರಕ್ ಆಗಿ ಬಂಗಾಳಕ್ಕೆ ಕಳುಹಿಸಿಕೊಡಲಾಯಿತು. 1948ರ ಹೊತ್ತಿಗೆ ಅಸ್ಸಾಂನಲ್ಲಿ ಸಂಘದ ಕೆಲಸವನ್ನು ಮಾಡಿದರು.

ಗುರೂಜೀ ಅವರ ಮಾರ್ಗದರ್ಶನದ ಮೇರೆಗೆ ಕಾರ್ಮಿಕ ಸಂಘಟನೆ ಇಂಟಕ್‌ನ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯ ಮತ್ತು ಮಧ್ಯಪ್ರದೇಶ ರಾಜ್ಯ ಇಂಟಕ್ ಕಾರ್ಯದರ್ಶಿಯಾದರು. 1952–55ರಲ್ಲಿ ಕಮ್ಯೂನಿಸ್ಟ್ ಪಕ್ಷದ ಬ್ಯಾಂಕ್ ನೌಕರರ ಸಂಘ ಎಐಬಿಇಎ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. 1954–55ರಲ್ಲಿ ಆರ್.ಎಂ.ಎಸ್. (ಅಂಚೆ) ನೌಕರರ ಸಂಘದ ಕೇಂದ್ರ ವಲಯದ (ಮಧ್ಯಪ್ರದೇಶ, ವಿದರ್ಭ ಮತ್ತು ರಾಜಸ್ಥಾನ) ಅಧ್ಯಕ್ಷರಾದರು. ಇಂಟಕ್‌ಗೆ ಸೇರಿದ ಜೀವವಿಮೆ, ರೈಲ್ವೇ, ಜವಳಿ, ಕಲ್ಲಿದ್ದಲು ಯೂನಿಯನ್‌ಗಳ ಅಧ್ಯಕ್ಷರಾದರು. ಆ ಮೂಲಕ ಕಾರ್ಮಿಕ ಸಂಘಗಳ ಕಾರ್ಯವಿಧಾನ ಮತ್ತು ಚಳವಳಿಗಳ ನೇರ ಮಾಹಿತಿಯನ್ನು ಪಡೆದುಕೊಂಡರು. ಕಮ್ಯೂನಿಸಂ ಮತ್ತು ಅವರ ಕಾರ್ಮಿಕ ಸಂಘಗಳ ಕಾರ್ಯವಿಧಾನವನ್ನು ಕೂಡ ತಿಳಿದುಕೊಂಡರು. ಅವರ ಅವಿರತ ಪ್ರಯತ್ನಗಳ ಫಲವಾಗಿ ದೇಶದ ವಿವಿಧ ಭಾಗಗಳಿಂದ ಬಂದ 35 ಜನ ಹಿರಿಯರ ಸಮ್ಮುಖದಲ್ಲಿ ಬಿಎಂಎಸ್ (ಭಾರತೀಯ ಮಜ್ದೂರ್ ಸಂಘ) ಸಂಘಟನೆ ಅತ್ಯಂತ ವಿನೀತವಾಗಿ ಆರಂಭಗೊಂಡಿತು. ಆರಂಭದಿಂದಲೂ ಅದರಲ್ಲಿ ಪ್ರಜಾಪ್ರಭುತ್ವದ ಆದರ್ಶವು ಇರುವಂತೆ ಠೇಂಗಡಿ ನೋಡಿಕೊಂಡರು.



1986ರಲ್ಲಿ ವ್ಯಾಪಾರೇತರ ವಸ್ತುಗಳನ್ನು ಗ್ಯಾಟ್ ಒಪ್ಪಂದದ ಕೆಳಗೆ ತರುವ ಬಗ್ಗೆ ಪರಿಶೀಲನೆ ನಡೆದಾಗ ದೇಶದಲ್ಲಿ ಮುಂದೆ ಬರುವ ಪರಿಸ್ಥಿತಿ ತಿಳಿಯತೊಡಗಿತು. ಆಗ ಠೇಂಗಡಿ ಅವರು 'ಸ್ವದೇಶೀ ಜಾಗರಣ ಮಂಚ್'ಅನ್ನು (1991) ಸ್ಥಾಪಿಸಿದರು. ಅದು ಪರ್ಯಾಯ ಸ್ವದೇಶೀ ಆರ್ಥಿಕ ಮಾದರಿಯನ್ನು ದೇಶದ ಮುಂದಿಟ್ಟಿತು. ಅದು ಕೇವಲ ಜಾಗತೀಕರಣವಿರೋಧವಲ್ಲ; ಬದಲಾಗಿ ವಿವೇಚನೆಯಿಲ್ಲದ ಜಾಗತೀಕರಣದ ವಿರುದ್ಧ ಒಂದು ತಡೆ ಯತ್ನ; ಭಾರತವು ಜಾಗತಿಕ ಶಕ್ತಿ ಆಗುವ ಬಗ್ಗೆ ಒಂದು ದರ್ಶನ (ವಿಶನ್). ಮಂಚ್ (ವೇದಿಕೆ) ವತಿಯಿಂದ ಮಾತನಾಡಿದ ಅವರು, "ಶೋಷಣೆ–ಆಧಾರಿತ ಬಂಡವಾಳಶಾಹಿ ವ್ಯವಸ್ಥೆಯು ಛಿದ್ರವಾಗಲಿದೆ; 2020ರೊಳಗೆ ಅಮೆರಿಕ ಆರ್ಥಿಕ ಕುಸಿತವನ್ನು ಅನುಭವಿಸಲಿದೆ"ಎಂದು ಭವಿಷ್ಯ ನುಡಿದರು.

ಕೃಷಿಕ್ಷೇತ್ರದ ಅನುಭವವಿದ್ದ ಕಾರ್ಯಕರ್ತರು ದತ್ತೋಪಂತ ಠೇಂಗಡಿ ಅವರ ಮಾರ್ಗದರ್ಶನವನ್ನು ಬಯಸಿದ್ದರು. ನೀರು, ವಿದ್ಯುತ್‌ಗಳ ಸಮಸ್ಯೆ ಮತ್ತು ಸರ್ಕಾರೀ ಅಧಿಕಾರಿಗಳ ಕಿರುಕುಳ ಇವು ದೇಶಾದ್ಯಂತ ಕೃಷಿಗೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳಾಗಿದ್ದು, ಅದರ ನಿವಾರಣೆಯ ಉದ್ದೇಶದಿಂದ 1979ರಲ್ಲಿ ಭಾರತೀಯ ಕಿಸಾನ್ ಸಂಘವನ್ನು (ಭಾಕಿಸಂ) ಸ್ಥಾಪಿಸಲಾಯಿತು.ಆಗಾಗ ತರಬೇತಿ ವರ್ಗಗಳನ್ನು ನಡೆಸಿ ನಮ್ಮ ಸಾಂಪ್ರದಾಯಿಕ ಕೃಷಿ ಪದ್ಧತಿಯ ಬಗ್ಗೆ ಶ್ರದ್ಧೆ, ವಿಶ್ವಾಸ ಮೂಡಿಸಲು ಮತ್ತು ಆಧುನಿಕ ಕೃಷಿಯ ಮಾಹಿತಿ ಮತ್ತು ತಂತ್ರಜ್ಞಾನಗಳನ್ನು ರೈತರಿಗೆ ಲಭ್ಯವಾಗಿಸಲು ಭಾಕಿಸಂ ಪ್ರಯತ್ನಿಸಿತು.ಕೃಷಿಗೆ ಎತ್ತುಗಳು ಅಗತ್ಯ; ದನ–ಎತ್ತುಗಳ ಸೆಗಣಿ, ಗಂಜಳ ಕೃಷಿಗೆ ಅಗತ್ಯ ಎನ್ನುವ ಹಿನ್ನೆಲೆಯಲ್ಲಿ ಭಾಕಿಸಂ ಗೋ–ಆಧಾರಿತ ಕೃಷಿಗೆ ಒತ್ತು ನೀಡುತ್ತದೆ.


ಸಾಮಾಜಿಕ್ ಸಮರಸತಾ ಮಂಚ್' ಮತ್ತು 'ಪರ್ಯಾವರಣ ಮಂಚ್' (ಎರಡೂ 1991ರಲ್ಲಿ ಸ್ಥಾಪನೆ) ಗಳು ಠೇಂಗಡಿ ಅವರು ಸ್ಥಾಪಿಸಿದ ಇನ್ನೆರಡು ಸಂಸ್ಥೆಗಳು. 'ಸರ್ವಪಂಥ್ ಸಮಭಾವ್' ಎನ್ನುವ ಸಂಸ್ಥೆಯನ್ನು ಕೂಡ ಅವರು ಸ್ಥಾಪಿಸಿದ್ದರು. ಇನ್ನು ಕೆಲವು ಸಂಸ್ಥೆಗಳಿಗೆ ಅವರು ಸ್ಥಾಪಕರಲ್ಲದಿದ್ದರೂ ಅವುಗಳಿಗೆ ಅವರ ಯೋಗದಾನ ಸಂದಿತ್ತು.

ಸರ್ಕಾರ 2003ರಲ್ಲಿ ಕರೆದು 'ಪದ್ಮಭೂಷಣ' ಪ್ರಶಸ್ತಿಯನ್ನು ಕೊಡುವುದಾಗಿ ಹೇಳಿತು. ರಾಷ್ಟ್ರಪತಿ ಅಬ್ದುಲ್ ಕಲಾಂ ಅವರಿಂದ ಪತ್ರ ಬಂದಿತ್ತು. ಅದನ್ನು ನಯವಾಗಿ ನಿರಾಕರಿಸುತ್ತ "ಆಯ್ಕೆ ಮಾಡಿದ್ದಕ್ಕೆ ತುಂಬಾ ಕೃತಜ್ಞತೆಗಳು. ಅದಕ್ಕೆ ನಾನು ಅರ್ಹನೇ ಎಂದು ಸಂಶಯವಾಗುತ್ತದೆ. ನಿಮ್ಮ ಬಗ್ಗೆ ತುಂಬಾ ಗೌರವ ಇದೆ; ನಿಮ್ಮ ಇಂದಿನ ಹುದ್ದೆಗಿಂತ ನಿಮ್ಮ ವೈಯಕ್ತಿಕ ಮಹಾನತೆಗಾಗಿ (ಗ್ರೇಟ್‌ನೆಸ್). ಆದರೆ ಡಾ॥ ಹೆಡಗೆವಾರ್ ಮತ್ತು ಗುರೂಜೀ ಅವರಿಗೆ 'ಭಾರತರತ್ನ'ವನ್ನು ಕೊಡುವ ತನಕ ನಾನು ಈ ಗೌರವವನ್ನು ಸ್ವೀಕರಿಸುವುದು ಸರಿಯಾಗುವುದಿಲ್ಲ" ಎಂದು ರಾಷ್ಟ್ರಪತಿಗೆ ಪತ್ರ ಬರೆದರು.

ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿದ್ದು ಸಕ್ರಿಯ ರಾಜಕೀಯದಲ್ಲಿದ್ದಾಗಲೂ ಅವರು ಬದಲಾಗಲಿಲ್ಲ. ವಿಪರೀತ ಕೆಲಸಗಳ ನಡುವೆಯೂ ಓದುತ್ತಿದ್ದರು; ಬರೆಯುತ್ತಿದ್ದರು. ಸುಮಾರು 50 ಪುಸ್ತಕಗಳನ್ನು ಠೇಂಗಡಿ ಅವರು ಬರೆದಿದ್ದು, 28 ಹಿಂದಿ, 12 ಇಂಗ್ಲಿಷ್ ಮತ್ತು ಹತ್ತು ಮರಾಠಿಯಲ್ಲಿವೆ. ವಿದೇಶಗಳಲ್ಲಿ ಸೇರಿದಂತೆ ಹಲವು ಸಮಾವೇಶಗಳಲ್ಲಿ ಪ್ರಬಂಧ ಮಂಡಿಸಿದ್ದರು.

---

## ಪುಸ್ತಕ ಪರಿಚಯ




### ಪರಂಪರಾಧಾರಿತ ಅಭ್ಯುದಯ ದರ್ಶನ
### ಧರ್ಮಪಾಲ್ ದೃಷ್ಟಿ

ಆಕಾರ: 1/8 ಡೆಮಿ
ಪುಟಗಳು: ii+174
ಬೆಲೆ: ರೂ. 150.00
ಸಂಪಾದಕ: ಎಂ.ಎಸ್. ಚೈತ್ರ
ಪ್ರಕಾಶಕರು: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು–560 004.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿಯವರ ತಾತ್ತ್ವಿಕತೆಯನ್ನೂ ಚಿಂತನಕ್ರಮವನ್ನೂ ಅನುಸರಿಸಿ, ಬೆಳೆಸಿದ ಕೆಲವೇ ಕೆಲವು 'ಗಾಂಧಿವಾದಿ'ಗಳಲ್ಲಿ ಧರ್ಮಪಾಲ್ ಅಗ್ರಗಣ್ಯರು. ಬಹುಪಾಲು 'ಗಾಂಧಿವಾದಿ'ಗಳಿಂದ ಉದಾಸೀನಕ್ಕೊಳಗಾದ ಮಾರ್ಗದಲ್ಲಿ ದೃಢ ಹೆಜ್ಜೆಗಳನ್ನಿಟ್ಟ ಧರ್ಮಪಾಲರು ಭಾರತವನ್ನು ಕುರಿತು ಉದ್ದೇಶಪೂರ್ವಕ ರಚಿಸಲಾಗಿದ್ದ 'ಹುಸಿ ಚಿತ್ರ'ಗಳ ನಿರಾಧಾರತೆಯನ್ನು ಬಯಲುಮಾಡಿದರು; ಭಾರತದ ನೈಜ ಚಿತ್ರವನ್ನು ಜಗತ್ತಿನೆದುರು ಬಿಡಿಸಿಟ್ಟರು. ಭಾರತೀಯ ಪರಂಪರೆಯಿಂದ ದೂರ ಸರಿದಿದ್ದ ಭಾರತೀಯ ಶಿಕ್ಷಿತ ಸಮುದಾಯಕ್ಕೆ ವಾಸ್ತವವನ್ನು ಮನವರಿಕೆಮಾಡಿಕೊಡುವ ಆಶಯದಿಂದ ಅವರು ಸಂಶೋಧನೆಗಷ್ಟೇ ಸೀಮಿತರಾಗದೇ, ತಮ್ಮ ಸಂಶೋಧನೆಗಳ ಫಲಿತಗಳನ್ನು ಜನಸಾಮಾನ್ಯರಿಗೂ ತಲುಪಿಸಲು ಸಾಕಷ್ಟು ಶ್ರಮವಹಿಸಿದರು. ದೇಶದಾದ್ಯಂತ ಪ್ರವಾಸಮಾಡಿದರು; ಉಪನ್ಯಾಸಗಳನ್ನು ನಡೆಸಿಕೊಟ್ಟರು; ನಿರಂತರ ಬರವಣಿಗೆಯನ್ನೂ ಮಾಡಿದರು. ಸ್ವಾತಂತ್ರ್ಯೋತ್ತರ ಭಾರತದ ಬೌದ್ಧಿಕ–ಶೈಕ್ಷಣಿಕ ಕ್ಷೇತ್ರ ಯಾವ ದಿಕ್ಕಿನಲ್ಲಿ ಸಾಗಬೇಕಿತ್ತು – ಎಂಬುದನ್ನು ಸಾಧಾರವಾಗಿ ನಿರೂಪಿಸಿದ ಧರ್ಮಪಾಲರನ್ನು ಸ್ಥೂಲವಾಗಿ ಪರಿಚಯಿಸುವ ಈ ಕೃತಿ ಪರಂಪರೆಯನ್ನೂ ಭವಿಷ್ಯವನ್ನೂ ಕುರಿತ ನಮ್ಮ ಚಿಂತನೆಗಳಿಗೂ ಹೊಸ ದಿಕ್ಕು–ದೆಸೆಯನ್ನು ತೋರಿಸಬಲ್ಲುದು.

---

## ಎಲ್ಲೋ ಕೇಳಿದ ಕಥೆ

ಒಂದಾನೊಂದು ಕಾಲದಲ್ಲಿ ಸರ್ಕಸ್‌ನಲ್ಲಿ ಐದು ಆನೆಗಳು ಸರ್ಕಸ್ ಮಾಡುತ್ತಿದ್ದವು. ಆನೆಗಳನ್ನು ಸುಲಭವಾಗಿ ತಪ್ಪಿಸಿಕೊಳ್ಳಬಹುದಂತಹ ದುರ್ಬಲ ಹಗ್ಗದಿಂದ ಕಟ್ಟಲಾಗಿತ್ತು. ಒಂದು ದಿನ, ಸರ್ಕಸ್‌ಗೆ ಭೇಟಿ ನೀಡಿದ ವ್ಯಕ್ತಿಯೊಬ್ಬ ರಿಂಗ್ ಮಾಸ್ಟರ್‌ಗೆ ಕುತೂಹಲದಿಂದ: "ಈ ಆನೆಗಳು ಹಗ್ಗವನ್ನು ಮುರಿದು ಏಕೆ ಓಡಿ ಹೋಗುವುದಿಲ್ಲವೆಂದು?" ಕೇಳಿದ.

ರಿಂಗ್ ಮಾಸ್ಟರ್ "ಆನೆಗಳು ಚಿಕ್ಕವರಾಗಿದ್ದಾಗಿನಿಂದ, ಹಗ್ಗಗಳನ್ನು ಮುರಿದು ತಪ್ಪಿಸಿಕೊಳ್ಳುವಷ್ಟು ಶಕ್ತಿಯಿಲ್ಲ ಎಂದು ನಂಬುವಂತೆ ಮಾಡಲಾಗಿದೆ" ಎಂದು ಉತ್ತರಿಸಿದರು. ಈ ನಂಬಿಕೆಯಿಂದಲೇ ಅವು ಈಗ ಹಗ್ಗವನ್ನು ಮುರಿಯಲು ಪ್ರಯತ್ನಿಸುವುದಿಲ್ಲ ಎಂದು ರಿಂಗ್ ಮಾಸ್ಟರ್ ಉತ್ತರಿಸಿದ.

ಸಮಾಜದ ಮಿತಿಗಳಿಗೆ ಮಣಿಯಬೇಡಿ. ನೀವು ಬಯಸುವ ಎಲ್ಲವನ್ನೂ ನೀವು ಸಾಧಿಸಬಹುದು ಎಂದು ನಂಬಿರಿ. ಎಲ್ಲಿಯವರೆಗೂ ಇದು ನಮ್ಮಿಂದ ಸಾಧ್ಯವಿಲ್ಲ ಎಂದು ಭಾವಿಸುತ್ತೇವೋ ಅಲ್ಲಿಯವರೆಗೂ ನಮ್ಮಿಂದ ಏನೂ ಸಾಧ್ಯವಿಲ್ಲ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

### ನ್ಯಾಷನಲ್ ಹೆರಾಲ್ಡ್ ಪ್ರಕರಣ: ಯಂಗ್ ಇಂಡಿಯಾ ಕಛೇರಿಗೆ ಬೀಗ ಜಡಿದ ಇಡಿ




ರಾಷ್ಟ್ರ ರಾಜಧಾನಿಯ ಹೆರಾಲ್ಡ್ ಹೌಸ್ ನಲ್ಲಿರುವ ಯಂಗ್ ಇಂಡಿಯನ್ ಕಚೇರಿಗೆ ಜಾರಿ ನಿರ್ದೇಶನಾಲಯ ಬೀಗ ಜಡಿದಿದೆ. ಪೂರ್ವಾನುಮತಿ ಇಲ್ಲದೆ ಆವರಣವನ್ನು ತೆರೆಯಬಾರದು ಎಂದು ಸಂಸ್ಥೆ ಸೂಚನೆ ನೀಡಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಸಂಸ್ಥೆಯು 12 ಸ್ಥಳಗಳಲ್ಲಿ ಶೋಧ ನಡೆಸಿದ ಒಂದು ದಿನದ ನಂತರ ಇಡಿ ಈ ಕ್ರಮ ಕೈಗೊಂಡಿದೆ.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಮಾಲೀಕತ್ವವನ್ನು ಹೊಂದಿರುವ ಕಾಂಗ್ರೆಸ್-ಪ್ರಚಾರದ ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ನಲ್ಲಿ ಆಪಾದಿತ ಹಣಕಾಸು ಅಕ್ರಮಗಳ ಕುರಿತು ಇಡಿ ತನಿಖೆ ನಡೆಸುತ್ತಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಕಾಂಗ್ರೆಸ್ ಮುಖ್ಯಸ್ಥೆ ಸೋನಿಯಾ ಗಾಂಧಿ ಮತ್ತು ಅವರ ಪುತ್ರ ರಾಹುಲ್ ಗಾಂಧಿ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ವಿಚಾರಣೆಗೆ ಒಳಪಡಿಸಲಾಗಿದೆ. ಯಂಗ್ ಇಂಡಿಯಾ ಸೀಲ್ ಡೌನ್ ಆದ ಬಳಿಕ ಕಾಂಗ್ರೆಸ್ ತುರ್ತು ಸಭೆ ಕರೆದಿದೆ.

### ದೇಶದ 861 ರೈಲು ನಿಲ್ದಾಣಗಳಲ್ಲಿ ಸಿಸಿಟಿವಿ ಅಳವಡಿಸಲಾಗಿದೆ: ಕೇಂದ್ರ



ದೇಶಾದ್ಯಂತ 861 ರೈಲು ನಿಲ್ದಾಣಗಳಲ್ಲಿ ಕ್ಲೋಸ್ಡ್ ಸರ್ಕ್ಯೂಟ್ ಟೆಲಿವಿಷನ್ ಅಥವಾ ಸಿಸಿಟಿವಿ ಕ್ಯಾಮೆರಾಗಳನ್ನು ಒದಗಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಈ ವಿಷಯ ತಿಳಿಸಿದ್ದಾರೆ.ನಿಲುಗಡೆ ನಿಲ್ದಾಣಗಳನ್ನು ಹೊರತುಪಡಿಸಿ ಎಲ್ಲಾ ರೈಲು ನಿಲ್ದಾಣಗಳಲ್ಲಿ ಸಿಸಿಟಿವಿಗಳನ್ನು ಒದಗಿಸುವ ಕಾಮಗಾರಿಗಳಿಗೆ ರೈಲ್ವೆ ಸಚಿವಾಲಯ ಅನುಮೋದನೆ ನೀಡಿದೆ ಎಂದು ಅವರು ಹೇಳಿದರು.

ರೈಲ್ವೆಯನ್ನು ಜನಸ್ನೇಹಿ ಮತ್ತು ಸುರಕ್ಷಿತವಾಗಿಸುವ ನಿಟ್ಟಿನಲ್ಲಿ ರೈಲ್ವೆ ಸಚಿವಾಲಯವು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ರೈಲು ನಿಲ್ದಾಣಗಳನ್ನು ಆಧುನೀಕರಿಸುವ ಮತ್ತು ಮೂಲಸೌಕರ್ಯಗಳನ್ನು ಅಭಿವೃದ್ಧಿ ಮಾಡುವ ಕಾರ್ಯಗಳು ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ.

### ಉತ್ತರಾಖಂಡದಲ್ಲಿ ಮಿಲಿಟರಿ ವ್ಯಾಯಾಮ ನಡೆಸಲಿವೆ ಭಾರತ-ಯುಎಸ್



ಭಾರತ ಮತ್ತು ಯುಎಸ್ ಈ ವರ್ಷದ ಅಕ್ಟೋಬರ್‌ನಲ್ಲಿ ಉತ್ತರಾಖಂಡದ ಔಲಿಯಲ್ಲಿ ಹದಿನೈದು ದಿನಗಳ ಕಾಲ ಮೆಗಾ ಮಿಲಿಟರಿ ವ್ಯಾಯಾಮವನ್ನು ನಡೆಸಲಿವೆ.

18ನೇ ಆವೃತ್ತಿಯ ಮಿಲಿಟರಿ ವ್ಯಾಯಾಮ "ಯುದ್ಧ ಅಭ್ಯಾಸ" ಅಕ್ಟೋಬರ್ 14 ರಿಂದ 31 ರವರೆಗೆ ನಡೆಯಲಿದೆ. ಮೆಗಾ ವ್ಯಾಯಾಮಕ್ಕಾಗಿ ಹಲವಾರು ಸಂಕೀರ್ಣ ಕಸರತ್ತುಗಳನ್ನು ಯೋಜಿಸಲಾಗುತ್ತಿದೆ. ಈ ವ್ಯಾಯಾಮವು ಎರಡು ಸೇನೆಗಳ ನಡುವೆ ತಿಳುವಳಿಕೆ, ಸಹಕಾರ ಮತ್ತು ಪರಸ್ಪರ ಕಾರ್ಯಸಾಧ್ಯತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಕಳೆದ ಕೆಲವು ವರ್ಷಗಳಿಂದ ಭಾರತ-ಅಮೇರಿಕ ರಕ್ಷಣಾ ಸಂಬಂಧಗಳು ಏರುಮುಖದಲ್ಲಿವೆ. ಜೂನ್ 2016ರಲ್ಲಿ, ಯುಎಸ್ ಭಾರತವನ್ನು "ಪ್ರಮುಖ ರಕ್ಷಣಾ ಪಾಲುದಾರ" ಎಂದು ಗೊತ್ತುಪಡಿಸಿದೆ. ಲಾಜಿಸ್ಟಿಕ್ಸ್ ಎಕ್ಸ್ಚೇಂಜ್ ಮೆಮೊರಾಂಡಮ್ ಆಫ್ ಅಗ್ರಿಮೆಂಟ್ (LEMOA) ಸೇರಿದಂತೆ ಕಳೆದ ಕೆಲವು ವರ್ಷಗಳಿಂದ ಉಭಯ ದೇಶಗಳು ಪ್ರಮುಖ ರಕ್ಷಣಾ ಮತ್ತು ಭದ್ರತಾ ಒಪ್ಪಂದಗಳಿಗೆ ಸಹಿ ಹಾಕಿವೆ. ಎರಡು ದೇಶಗಳ ಮಿಲಿಟರಿಗಳು ಪರಸ್ಪರರ ನೆಲೆಗಳನ್ನು ದುರಸ್ತಿ ಮಾಡಲು ಮತ್ತು ಪೂರೈಕೆಗಳ ಮರುಪೂರಣಕ್ಕಾಗಿ ಬಳಸಲು ಅನುಮತಿಸುವ ಒಪ್ಪಂದವು ಆಳವಾದ ಸಹಕಾರವನ್ನು ಒದಗಿಸುತ್ತದೆ.

## ಸಾಲುದ್ದದ ಸುದ್ದಿಗಳು

### ಭಾರತದಿಂದ 116 ವಿದೇಶಗಳೊಂದಿಗೆ ದ್ವಿಪಕ್ಷೀಯ ವಾಯು ಸೇವಾ ಒಪ್ಪಂದ

ಭಾರತವು 116 ವಿದೇಶಗಳೊಂದಿಗೆ ದ್ವಿಪಕ್ಷೀಯ ವಾಯು ಸೇವಾ ಒಪ್ಪಂದಕ್ಕೆ (ASA) ಸಹಿ ಹಾಕಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ನಾಗರಿಕ ವಿಮಾನಯಾನ ರಾಜ್ಯ ಸಚಿವ ವಿಕೆ ಸಿಂಗ್ ಅವರು ಈ ಮಾಹಿತಿಯನ್ನು ನೀಡಿದ್ದಾರೆ.

ಭಾರತವು ದ್ವಿಪಕ್ಷೀಯ ವಾಯು ಸೇವಾ ಒಪ್ಪಂದಗಳಿಗೆ ಸಹಿ ಹಾಕಿದ ದೇಶಗಳಲ್ಲಿ ಏಷ್ಯಾ, ಯುರೋಪ್, ಮಧ್ಯಪ್ರಾಚ್ಯ ಮತ್ತು ದಕ್ಷಿಣ ಅಮೇರಿಕ ರಾಷ್ಟ್ರಗಳು, ಯುಎಸ್ಎ, ಪಾಕಿಸ್ತಾನ, ಯುಕೆ, ಇರಾನ್, ಅಫ್ಘಾನಿಸ್ತಾನ ಮತ್ತು ಚೀನಾ ಸೇರಿವೆ.ದ್ವಿಪಕ್ಷೀಯ ವಾಯು ಸೇವಾ ಒಪ್ಪಂದ ಅಥವಾ ವಾಯು ಸಾರಿಗೆ ಒಪ್ಪಂದ (ATA) ಎರಡು ರಾಷ್ಟ್ರಗಳ ನಡುವಿನ ಒಪ್ಪಂದವಾಗಿದ್ದು ಅದು ಎರಡು ದೇಶಗಳ ನಡುವಿನ ಅಂತರರಾಷ್ಟ್ರೀಯ ವಾಯು ಸೇವೆಗಳ ಕಾರ್ಯಾಚರಣೆಗಾಗಿ ಸಂಚಾರ ಹಕ್ಕುಗಳನ್ನು ನಿರ್ದಿಷ್ಟಪಡಿಸುತ್ತದೆ.

ಭಾರತದ ಗೊತ್ತುಪಡಿಸಿದ ವಿಮಾನಗಳು ಒಪ್ಪಂದಕ್ಕೆ ಒಳಪಟ್ಟ ವಿದೇಶಗಳ ಯಾವುದೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ/ನಿಲ್ದಾಣದಿಂದ ನಿಗದಿತ ಕಾರ್ಯಾಚರಣೆಗಳನ್ನು ನಡೆಸಲು ಮುಕ್ತವಾಗಿರುತ್ತದೆ.

### ಜುಲೈನಲ್ಲಿ 10.62 ಲಕ್ಷ ಕೋಟಿ ರೂ ಮೌಲ್ಯದ 6.28 ಬಿಲಿಯನ್ ವಹಿವಾಟು: UPI ದಾಖಲೆ




ಮಹತ್ವದ ಬೆಳವಣಿಗೆಯಲ್ಲಿ, ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್ (UPI) ಪ್ಲಾಟ್‌ಫಾರ್ಮ್‌ನಲ್ಲಿನ ಮಾಸಿಕ ವಹಿವಾಟುಗಳ ಸಂಖ್ಯೆಯು ಜುಲೈನಲ್ಲಿ 6 ಶತಕೋಟಿಯನ್ನು ಮೀರಿದೆ, ಇದು 2016ರಲ್ಲಿ ಯುಪಿಐ ಪ್ರಾರಂಭವಾದಾಗಿನಿಂದ ದಾಖಲಾದ ಅತ್ಯಧಿಕ ಅಂಕಿಅಂಶವಾಗಿದೆ. ಈ ನಡುವೆ, ವರ್ಷದಿಂದ ವರ್ಷಕ್ಕೆ ವಹಿವಾಟಿನ ಪ್ರಮಾಣವು ದ್ವಿಗುಣಗೊಂಡಿದೆ ಮತ್ತು ಮೌಲ್ಯವು ಶೇಕಡಾ 75 ರಷ್ಟು ಹೆಚ್ಚಾಗಿದೆ.

ಯುಪಿಐ ಪ್ಲಾಟ್‌ಫಾರ್ಮ್ ಅನ್ನು ಅಭಿವೃದ್ಧಿಪಡಿಸಿದ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಮೇ ತಿಂಗಳಲ್ಲಿ ಸುಮಾರು 10.41 ಲಕ್ಷ ಕೋಟಿ ರೂಪಾಯಿ ಮೌಲ್ಯದ 5.95 ಶತಕೋಟಿ ವಹಿವಾಟುಗಳು ನಡೆದಿದೆ, ಜೂನ್ನಲ್ಲಿ 10.16 ಲಕ್ಷ ಕೋಟಿ ರೂಪಾಯಿ ಮೌಲ್ಯದ 5.86 ಬಿಲಿಯನ್ ವಹಿವಾಟುಗಳು ನಡೆದಿದೆ.

ಪ್ಲಾಟ್‌ಫಾರ್ಮ್ 2016ರಲ್ಲಿ ಪ್ರಾರಂಭವಾದ ಮೂರು ವರ್ಷಗಳ ನಂತರ ಅಕ್ಟೋಬರ್ 2019ರಲ್ಲಿ ಮೊದಲ ಬಾರಿಗೆ 1 ಬಿಲಿಯನ್ ವಹಿವಾಟುಗಳನ್ನು ಮೀರಿತ್ತು.

### ಮಾತಾ ಮಚೈಲ್ ದೇಗುಲಕ್ಕೆ 70 ಅಡಿ ಉದ್ದದ ಬೈಲಿ ಸೇತುವೆ ನಿರ್ಮಿಸಿದ ಸೇನೆ

ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ಹಿಮಾಲಯದ ಮಾತಾ ಮಚೈಲ್ ದೇಗುಲಕ್ಕೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಅನುಕೂಲವಾಗುವಂತೆ ಸೇನೆಯು ನದಿಯ ಮೇಲೆ 170 ಅಡಿ ಉದ್ದದ ಬೈಲಿ ಸೇತುವೆಯನ್ನು ನಿರ್ಮಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಇತ್ತೀಚೆಗಷ್ಟೇ ಪ್ರವಾಹದಿಂದಾಗಿ ಸೇತುವೆ ಕೊಚ್ಚಿ ಹೋಗಿತ್ತು.

ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಎರಡು ವರ್ಷಗಳ ನಂತರ ಸೋಮವಾರದಿಂದ ಪ್ರಾರಂಭವಾದ 40 ದಿನಗಳ ವಾರ್ಷಿಕ ಶ್ರೀ ಮಚೈಲ್ ಮಾತಾ ಯಾತ್ರೆಯು ಭಾರೀ ಮಳೆಯ ನಡುವೆಯೂ ಯಾತ್ರಾರ್ಥಿಗಳ ಭಾರೀ ನೂಕುನುಗ್ಗಲಿಗೆ ಸಾಕ್ಷಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

"ಜಿಲ್ಲಾಡಳಿತದ ಕೋರಿಕೆಯ ಮೇರೆಗೆ, ಕಿಶ್ತ್ವಾರ್, ಎನ್‌ಎಚ್‌ಐಡಿಸಿಎಲ್ ಬೆಂಬಲದೊಂದಿಗೆ ಭಾರತೀಯ ಸೇನೆಯು ಮಚೈಲ್ ಯಾತ್ರೆಗೆ ಅನುಕೂಲವಾಗುವಂತೆ ಕುಂಡೆಲ್‌ನಲ್ಲಿ 170 ಅಡಿ ಉದ್ದದ ಬೈಲಿ ಸೇತುವೆಯನ್ನು ಜಂಟಿಯಾಗಿ ನಿರ್ಮಿಸಿದೆ" ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಎಂಜಿನಿಯರಿಂಗ್ ರೆಜಿಮೆಂಟ್ ರಾಷ್ಟ್ರೀಯ ರೈಫಲ್ಸ್ (ಆರ್‌ಆರ್) ಮತ್ತು ರಾಷ್ಟ್ರೀಯ ಹೆದ್ದಾರಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ (ಎನ್‌ಎಚ್‌ಐಡಿಸಿಎಲ್) ಕಂಪನಿಗಳು ದಾಖಲೆಯ ಸಮಯದಲ್ಲಿ ಸೇತುವೆಯ ಸ್ಥಾಪನೆಯನ್ನು ಪೂರ್ಣಗೊಳಿಸಿವೆ ಮತ್ತು ಯಾತ್ರಿಗಳ ಅನುಕೂಲಕ್ಕಾಗಿ ಇದನ್ನು ತೆರೆದಿವೆ" ಎಂದಿದ್ದಾರೆ.

ವಾರ್ಷಿಕ ಯಾತ್ರೆಯನ್ನು ಸುಗಮವಾಗಿ ಮತ್ತು ಸಮಸ್ಯೆ ಮುಕ್ತವಾಗಿ ನಡೆಸಲು ಪೊಲೀಸ್ ಮತ್ತು ನಾಗರಿಕ ಆಡಳಿತದಿಂದ ಮಾರ್ಗದಲ್ಲಿ ವಿಸ್ತಾರವಾದ ಭದ್ರತಾ ವ್ಯವಸ್ಥೆಗಳು ಮತ್ತು ಮೂಲ ಸೌಕರ್ಯಗಳನ್ನು ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಹೆಚ್ಚಿನ ಸಂಖ್ಯೆಯ ಪೊಲೀಸ್ ಸಿಬ್ಬಂದಿ ಮತ್ತು ವೈದ್ಯಕೀಯ ಮತ್ತು ಇತರ ಸಿಬ್ಬಂದಿಯನ್ನು ದೇಗುಲದ ಮಾರ್ಗದಲ್ಲಿ ನಿಯೋಜಿಸಲಾಗಿದ್ದು, ಪ್ರಯಾಣವನ್ನು ಸುರಕ್ಷಿತವಾಗಿಸಲಾಗಿದೆ.

### ಅಕ್ಟೋಬರ್‌ನಲ್ಲಿ 5G ಸ್ಪೆಕ್ಟ್ರಮ್‌ನ ಅನುಷ್ಠಾನ ಆರಂಭ: ಅಶ್ವಿನ್ ವೈಷ್ಣವ್

5G ಸ್ಪೆಕ್ಟ್ರಮ್‌ನ ಅನುಷ್ಠಾನ ಅಕ್ಟೋಬರ್ ಆರಂಭದಲ್ಲಿ ನಡೆಯಲಿದೆ, ಮುಂದಿನ 2-3 ದಿನಗಳಲ್ಲಿ ಸ್ಪೆಕ್ಟ್ರಮ್ ಹರಾಜು ಪೂರ್ಣಗೊಳ್ಳಲಿದ್ದು, ನಂತರ ಶೀಘ್ರದಲ್ಲೇ ಸ್ಪೆಕ್ಟ್ರಮ್ ಹಂಚಿಕೆ ನಡೆಯಲಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಹೇಳಿದ್ದಾರೆ.




"ಸಿದ್ಧತೆ ನಡೆಸಿಕೊಂಡು ಸ್ಪೆಕ್ಟ್ರಮ್ ಹಂಚಿಕೆಯ ನಂತರ ತ್ವರಿತವಾಗಿ ಕಾರ್ಯನಿರ್ವಹಿಸಬೇಕು ಎಂದು ನಾವು ಈಗಾಗಲೇ ಉದ್ಯಮಕ್ಕೆ ತಿಳಿಸಿದ್ದೇವೆ, ಶೀಘ್ರದಲ್ಲೇ ಸೇವೆಗಳನ್ನು ನೀಡಬೇಕು ಎಂಬುದು ನಮ್ಮ ಯೋಜನೆಯಾಗಿದೆ " ಎಂದು ಅವರು ಹೇಳಿದ್ದಾರೆ.

"5G ಸ್ಪೆಕ್ಟ್ರಮ್ ಹರಾಜು ಚೆನ್ನಾಗಿ ನಡೆಯುತ್ತಿದೆ, ಉದ್ಯಮವು ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಿದೆ, ಸ್ಪೆಕ್ಟ್ರಮ್ ಖರೀದಿಸಲು ಉದ್ಯಮವು ಸುಮಾರು 1.50 ಲಕ್ಷ ಕೋಟಿ ರೂಪಾಯಿ ಬಿಡ್ ಮಾಡಿದೆ" ಎಂದು ವೈಷ್ಣವ್ ಹೇಳಿದ್ದಾರೆ.

ಒಂದೆಡೆ, ನಾವು ಮೀಸಲು ಬೆಲೆಯನ್ನು ಕಡಿಮೆಗೊಳಿಸಿದ್ದೇವೆ, ಮತ್ತೊಂದೆಡೆ, ನಾವು ಸ್ಪೆಕ್ಟ್ರಮ್ ಬಳಕೆಯ ಶುಲ್ಕವನ್ನು (ಎಸ್ಯುಸಿ) ಸಹ ಕಡಿತಗೊಳಿಸಿದ್ದೇವೆ. ಇದು ಉತ್ತಮ ಪ್ರತಿಕ್ರಿಯೆಯನ್ನು ಖಾತ್ರಿಪಡಿಸಿದೆ. ಎರಡನೆಯದಾಗಿ, ಪಾವತಿ ನಿಯಮಗಳನ್ನು ಬದಲಾಯಿಸಲಾಗಿದೆ. ಹಿಂದಿನ ಹರಾಜಿನಲ್ಲಿ ಭಾರಿ ಮುಂಗಡ ಪಾವತಿಯನ್ನು ಪಾವತಿಸಬೇಕಾಗಿತ್ತು, ಈಗ ಸಂಪೂರ್ಣ ಮೊತ್ತವನ್ನು 20 ಕಂತುಗಳಲ್ಲಿ ಪಾವತಿಸಬಹುದು, ಇದು ಪಾವತಿಯ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ನೆಟ್‌ವರ್ಕ್‌ನ ವ್ಯಾಪ್ತಿಯನ್ನು ಹೆಚ್ಚಿಸುವತ್ತ ಗಮನಹರಿಸಲು ಆಪರೇಟರ್‌ಗಳನ್ನು ಸಕ್ರಿಯಗೊಳಿಸುತ್ತದೆ. ಮೂರನೆಯದಾಗಿ, ದೊಡ್ಡದಾದ ಮತ್ತು ಗಮನಾರ್ಹ ವೆಚ್ಚದ ಹೊರೆಯಾಗಿದ್ದ ಬ್ಯಾಂಕ್ ಗ್ಯಾರಂಟಿಯನ್ನು ತೆಗೆದುಹಾಕಲಾಗಿದೆ" ಎಂದಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th AUGUST 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-08-2022



## ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟ ಪರೀಕ್ಷೆಗೆ ಮೊಬೈಲ್ ತಪಾಸಣಾ ವ್ಯಾನ್

ಕೇಂದ್ರ ಸರ್ಕಾರವು ಗುಜರಾತ್, ರಾಜಸ್ಥಾನ, ಒಡಿಶಾ ಮತ್ತು ಕರ್ನಾಟಕ – ಈ ನಾಲ್ಕು ರಾಜ್ಯಗಳಲ್ಲಿ ನಾನ್–ಡೆಸ್ಟ್ರಕ್ಟಿವ್ ಟೆಸ್ಟಿಂಗ್ (ಎನ್‌ಡಿಟಿ) ಮೂಲಕ ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟ ತಪಾಸಣೆಗಾಗಿ ಮೊಬೈಲ್ ತಪಾಸಣಾ ವ್ಯಾನ್‌ಗಳ (ಎಂಐವಿ) ಸೇವೆಗಳನ್ನು ಪ್ರಾಯೋಗಿಕವಾಗಿ ಆರಂಭಿಸಿದೆ. ರಸ್ತೆ ಸಾರಿಗೆ ಸಚಿವಾಲಯದ ಜಾಗತಿಕ ಗುಣಮಟ್ಟದ ಮಾನದಂಡಗಳೊಂದಿಗೆ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವ ಬದ್ಧತೆಯ ಭಾಗವಾಗಿ ಈ ಸೇವಗಳನ್ನು ಆರಂಭಿಸಲಾಗುತ್ತಿದೆ.

ಮೊಬೈಲ್ ತಪಾಸಣಾ ವ್ಯಾನ್‌ಗಳ ಬಳಕೆಯು ಗುಣಮಟ್ಟಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಲು ಹೆಚ್ಚು ಪೂರ್ವಭಾವಿ ವಿಧಾನವನ್ನು ಪರಿಚಯಿಸುವ ಮೂಲಕ ರಾಷ್ಟ್ರೀಯ ಹೆದ್ದಾರಿ ಕಾರ್ಯಗಳಲ್ಲಿ ಅಸ್ತಿತ್ವದಲ್ಲಿರುವ ಗುಣಮಟ್ಟ ನಿಯಂತ್ರಣ ಮತ್ತು ಗುಣಮಟ್ಟ ಸ್ವೀಕಾರ ವ್ಯವಸ್ಥೆಗಳನ್ನು ಬಲಪಡಿಸುತ್ತದೆ.

ಈ ಎಂಐವಿಗಳನ್ನು ಬಳಸಿಕೊಂಡು ಪ್ರತಿ ರಾಜ್ಯದಲ್ಲಿ ತ್ರೈಮಾಸಿಕ 2,000 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ಪರಿಶೀಲಿಸಲಾಗುತ್ತದೆ. ಎನ್‌ಎಚ್‌ಎಐ/ಎನ್‌ಎಚ್‌ಐಡಿಸಿಎಲ್/ರಾಜ್ಯ ಪಿಡಬ್ಲ್ಯೂಡಿಗಳು ಮತ್ತು ಸಚಿವಾಲಯದ ಇತರ ಕಾರ್ಯನಿರ್ವಾಹಕ ಏಜೆನ್ಸಿಗಳು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳನ್ನು ತಪಾಸಣೆ ನಡೆಸಲಾಗುತ್ತದೆ.

ಗುಜರಾತ್‌ಗೆ ಸಂಬಂಧಿಸಿದ ಒಪ್ಪಂದಕ್ಕೆ ನನ್ನೆ ಸಹಿ ಹಾಕಲಾಯಿತು. ರಾಜಸ್ಥಾನ, ಒಡಿಶಾ ಮತ್ತು ಕರ್ನಾಟಕ ಒಪ್ಪಂದಕ್ಕೆ ಶೀಘ್ರದಲ್ಲೇ ಸಹಿ ಹಾಕಲಾಗುತ್ತದೆ. ಅಂತಹ ಹೆಚ್ಚಿನ ವ್ಯಾನ್‌ಗಳು ಭವಿಷ್ಯದಲ್ಲಿ ಇತರ ರಾಜ್ಯಗಳಲ್ಲಿ ತೊಡಗಿಸಿಕೊಳ್ಳುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ.




## ಚೀನಿ ಸೇರಿದಂತೆ ವಿದೇಶಗಳ 348 ಮೊಬೈಲ್ ಆ್ಯಪ್ ನಿರ್ಬಂಧಿಸಿದೆ ಕೇಂದ್ರ




ಚೀನಾ ಸೇರಿದಂತೆ ವಿವಿಧ ದೇಶಗಳು ಅಭಿವೃದ್ಧಿಪಡಿಸಿದ 348 ಮೊಬೈಲ್ ಅಪ್ಲಿಕೇಶನ್‌ಗಳನ್ನು ಸರ್ಕಾರ ಗುರುತಿಸಿ ನಿರ್ಬಂಧಿಸಿದೆ. ಬಳಕೆದಾರರ ಮಾಹಿತಿಯನ್ನು ಸಂಗ್ರಹಿಸಿ ಅನಧಿಕೃತ ರೀತಿಯಲ್ಲಿ ವಿದೇಶಕ್ಕೆ ರವಾನಿಸುತ್ತಿದ್ದ ಆರೋಪ ಇವುಗಳ ಮೇಲಿತ್ತು.

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಲೋಕಸಭೆಯಲ್ಲಿ ಬಿಜೆಪಿಯ ರೋಡ್ಮಲ್ ನಗರ್ ಅವರ ಪ್ರಶ್ನೆಗೆ ಉತ್ತರವಾಗಿ ಈ ಮಾಹಿತಿಯನ್ನು ನೀಡಿದರು.

348 ಮೊಬೈಲ್ ಅಪ್ಲಿಕೇಶನ್‌ಗಳು ಬಳಕೆದಾರರ ಮಾಹಿತಿಯನ್ನು ಸಂಗ್ರಹಿಸುತ್ತಿದ್ದವು ಮತ್ತು ಪ್ರೊಫೈಲಿಂಗ್‌ಗಾಗಿ ದೇಶದ ಹೊರಗಿನ ಸರ್ವರ್‌ಗಳಿಗೆ ಅನಧಿಕೃತ ರೀತಿಯಲ್ಲಿ ರವಾನಿಸುತ್ತಿದ್ದವು ಎಂದು ಚಂದ್ರಶೇಖರ್ ಹೇಳಿದ್ದಾರೆ.

ಕೇಂದ್ರ ಗೃಹ ಸಚಿವಾಲಯವು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ವಿನಂತಿಯನ್ನು ಆಧರಿಸಿ ಆ 348 ಮೊಬೈಲ್ ಅಪ್ಲಿಕೇಶನ್‌ಗಳನ್ನು ನಿರ್ಬಂಧಿಸಿದೆ. ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ಉಲ್ಲಂಘಿಸಿದ ಕಾರಣಕ್ಕೆ ಭಾರತದ ರಕ್ಷಣೆ ಮತ್ತು ರಾಜ್ಯದ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಂಡಿದೆ ಎಂದು ಅವರು ಹೇಳಿದರು.

ಈ ಎಲ್ಲಾ ಆ್ಯಪ್‌ಗಳನ್ನು ಚೀನಾ ಅಭಿವೃದ್ಧಿಪಡಿಸಿದೆಯೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಚಂದ್ರಶೇಖರ್, ಈ ಅಪ್ಲಿಕೇಶನ್‌ಗಳನ್ನು ಚೀನಾ ಸೇರಿದಂತೆ ವಿವಿಧ ದೇಶಗಳು ಅಭಿವೃದ್ಧಿಪಡಿಸಿವೆ ಎಂದು ಹೇಳಿದರು.

## 23.08 ಕೋಟಿ ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ ಸಂಖ್ಯೆಗಳನ್ನು ರಚಿಸಲಾಗಿದೆ




ದೇಶದಾದ್ಯಂತ ಡಿಜಿಟಲ್ ಆರೋಗ್ಯ ಪರಿಸರ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಪ್ರಗತಿ ಅಭೂತಪೂರ್ವವಾಗಿದೆ ಮತ್ತು 23.08 ಕೋಟಿ ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ (ABHA) ಸಂಖ್ಯೆಗಳನ್ನು ರಚಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ತಿಳಿಸಿದ್ದಾರೆ.

"ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ದೇಶಾದ್ಯಂತ ಡಿಜಿಟಲ್ ಆರೋಗ್ಯ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಜನರ ಜೀವನವನ್ನು ಪರಿವರ್ತಿಸುತ್ತಿದೆ. ಇದರ ಅಡಿಯಲ್ಲಿ, 23.08 ಕೋಟಿ ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ (ABHA) ಸಂಖ್ಯೆಗಳನ್ನು ರಚಿಸಲಾಗಿದೆ" ಎಂದು ಮನ್ಸುಖ್ ಮಾಂಡವಿಯಾ ಟ್ವೀಟ್ ಮಾಡಿದ್ದಾರೆ.

ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ABDM) ದೇಶದ ಸಮಗ್ರ ಡಿಜಿಟಲ್ ಆರೋಗ್ಯ ಮೂಲಸೌಕರ್ಯವನ್ನು ಬೆಂಬಲಿಸಲು ಅಗತ್ಯವಾದ ಬೆನ್ನೆಲುಬನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ. ಇದು ಡಿಜಿಟಲ್ ಹೆದ್ದಾರಿಗಳ ಮೂಲಕ ಹೆಲ್ತ್ ಕೇರ್ ಪರಿಸರ ವ್ಯವಸ್ಥೆಯ ವಿವಿಧ ಮಧ್ಯಸ್ಥಗಾರರ ನಡುವೆ ಅಸ್ತಿತ್ವದಲ್ಲಿರುವ ಅಂತರವನ್ನು ಕಡಿಮೆ ಮಾಡುತ್ತದೆ ಎಂದಿದ್ದಾರೆ.

ಫೆಬ್ರವರಿ 26, 2022ರಂದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟವು ಕೇಂದ್ರ ವಲಯದ ಯೋಜನೆಯಾದ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ABDM) ಅನ್ನು 1,600 ಕೋಟಿ ರೂಪಾಯಿಗಳ ಬಜೆಟ್‌ನೊಂದಿಗೆ ಅನುಮೋದಿಸಿತು. ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ (ಎನ್‌ಎಚ್‌ಎ) ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಅನ್ನು ಅನುಷ್ಠಾನಗೊಳಿಸುವ ಸಂಸ್ಥೆಯಾಗಿದೆ.

## ಟೋಲ್ ಪ್ಲಾಜಾ ಬದಲಿಗೆ ಹೊಸ ತಂತ್ರಜ್ಞಾನ ಪರಿಚಯಿಸಲು ಕೇಂದ್ರ ಚಿಂತನೆ




ವಾಹನಗಳ ಸುಗಮ ಸಂಚಾರವನ್ನು ಖಚಿತಪಡಿಸಿಕೊಳ್ಳಲು ದೇಶದಲ್ಲಿ ಟೋಲ್ ಪ್ಲಾಜಾಗಳನ್ನು ಬದಲಿಸಿ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ.

ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ರಸ್ತೆ, ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಮುಂದಿನ ಆರು ತಿಂಗಳಲ್ಲಿ ಹೊಸ ವ್ಯವಸ್ಥೆಯನ್ನು ಪರಿಚಯಿಸಲಾಗುವುದು. ಸರ್ಕಾರವು ಎರಡು ಆಯ್ಕೆಗಳನ್ನು ಹುಡುಕುತ್ತಿದ್ದು, ಅದರಲ್ಲಿ ಒಂದು ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆಯಾಗಿದ್ದು, ಜಿಪಿಎಸ್ ವ್ಯವಸ್ಥೆಯ ಮೂಲಕ ಟೋಲ್ ಅನ್ನು ನೇರವಾಗಿ ಪ್ರಯಾಣಿಕರ ಬ್ಯಾಂಕ್ ಖಾತೆಗಳಿಂದ ತೆಗೆಯಲಾಗುತ್ತದೆ ಮತ್ತು ಇನ್ನೊಂದು ಆಯ್ಕೆಯು ವಾಹನಗಳ ನಂಬರ್ ಪ್ಲೇಟ್‌ಗಳ ಮೂಲಕ ಹಣ ಪಡೆಯುವುದಾಗಿದೆ. ಟೋಲ್ ಸಂಗ್ರಹಿಸಲು ಉಪಗ್ರಹ ಆಧಾರಿತ ವ್ಯವಸ್ಥೆಯನ್ನು ಬಳಸುವಾಗ ಫಾಸ್ಟ್ಯಾಗ್ ಬದಲಿಗೆ ಜಿಪಿಎಸ್ ಅನ್ನು ಪರಿಚಯಿಸುವ ಪ್ರಕ್ರಿಯೆಯಲ್ಲಿ ಸರ್ಕಾರ ಇದೆ. ಸರ್ಕಾರವು ಟೋಲ್ ಸಂಗ್ರಹಕ್ಕೆ ಅತ್ಯುತ್ತಮ ತಂತ್ರಜ್ಞಾನವನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿದೆ ಮತ್ತು ಈ ನಿಟ್ಟಿನಲ್ಲಿ ಸಂಸತ್ತಿನಲ್ಲಿ ಮಹತ್ವದ ಕಾನೂನನ್ನು ತರಲಿದೆ ಎಂದು ಗಡ್ಕರಿ ಹೇಳಿದರು.

ಟೋಲ್ ಪ್ಲಾಜಾಗಳಲ್ಲಿ ಟ್ರಾಫಿಕ್ ಜಾಮ್‌ನಿಂದ ಜನರಿಗೆ ಪರಿಹಾರ ನೀಡಲು ಈ ವ್ಯವಸ್ಥೆ ಮುಖ್ಯವಾಗಿದೆ ಎಂದು ಅವರು ಹೇಳಿದರು. ಫಾಸ್ಟ್ಯಾಗ್ ಪರಿಚಯಿಸಿದ ನಂತರ ಟೋಲ್ ಸಂಗ್ರಹವು ದಿನಕ್ಕೆ 120 ಕೋಟಿ ರೂಪಾಯಿಗಳಿಗೆ ಗಣನೀಯವಾಗಿ ಏರಿದೆ ಎಂದು ಗಡ್ಕರಿ ತಿಳಿಸಿದರು. ಇಲ್ಲಿಯವರೆಗೆ, 5.56 ಕೋಟಿ ಫಾಸ್ಟ್ಯಾಗ್‌ಗಳನ್ನು ನೀಡಲಾಗಿದೆ ಮತ್ತು ಅದರ ವ್ಯಾಪ್ತಿ ಸುಮಾರು 97 ಪ್ರತಿಶತವನ್ನು ತಲುಪಿದೆ ಎಂದು ಸಚಿವರು ಹೇಳಿದರು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.